ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ : ಸಶಿಅ/ಮೀ.ದಾ/ಕ್ರಿ.ಯೋ/7/2011–12 ದಿನಾಂಕ: 21.02.2012

**ಆಸಕ್ತಿ ಅಭಿವ್ಯಕ್ತಿಗಾಗಿ ಪ್ರಕಟಣೆ**

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಇಲಾಖೆಯ ಪ್ರಾಥಮಿಕ ಹಾಗೂ ಪ್ರೌಢ ಹಂತದ ಶೈಕ್ಷಣಿಕ ಚಟುವಟಿಕೆಗಳು, ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಅಗತ್ಯತೆಗಳ ಪೂರೈಕೆಗಾಗಿ, **'ಮಾಧ್ಯಮ ಹಾಗೂ ದಾಖಲೀಕರಣ ಕೋಶ'**ವನ್ನು ಸ್ಥಾಪಿಸಲಿದೆ. ಈ ಕೋಶದ ಚಟುವಟಿಕೆಗಳ ನಿರ್ವಹಣೆಗಾಗಿ ಅನುಭವಿ ಸಮಾಲೋಚಕ ಸಂಸ್ಥೆಯ ಸೇವೆ ಅವಶ್ಯಕತೆ ಇರುತ್ತದೆ. ಮಾಧ್ಯಮ, ದಾಖಲೀಕರಣ ಮತ್ತು ಸಾರ್ವಜನಿಕ ಸಂಪರ್ಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳು, ಮುಕ್ತವಾಗಿ ಕಾರ್ಯ ನಿರ್ವಹಿಸುವ ಒಪ್ಪಂದದ ಮೇರೆಗೆ ಸಮಾಲೋಚಕ ಸಂಸ್ಥೆ (PR) ನೇಮಕಕ್ಕೆ, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳು ಅರ್ಜಿ ನಮೂನೆ, ನಿರೀಕ್ಷಿತ ಕಾರ್ಯಭಾರಗಳು, ಒಪ್ಪಂದದ ಮೇರೆಗೆ ನೇಮಕದ ಷರತ್ತುಗಳು ಹಾಗೂ ಇತರೆ ಮಾಹಿತಿಗಳನ್ನು **www.ssakarnataka.gov.in** ಈ ಅಂತರ್ಜಾಲ ವಿಳಾಸದಲ್ಲಿ ಪಡೆಯಬಹುದು. ಆಸಕ್ತ ಸಂಸ್ಥೆಗಳು **ದಿನಾಂಕ: 05.03.2012 ರೊಳಗಾಗಿ ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು** ಇಲ್ಲಿಗೆ ಅರ್ಜಿಯನ್ನು ನೀಡಬಹುದು.

ಸಹಿ/–
**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು**

**ಸಂಸ್ಥೆಗಳೊಡನೆ ಒಪ್ಪಂದದ ಮೇರೆಗೆ ಶಿಕ್ಷಣ ಇಲಾಖೆಯ ಮಾಧ್ಯಮ ಹಾಗೂ ದಾಖಲೀಕರಣ ಕೋಶಕ್ಕೆ ಸಮಾಲೋಚಕರ ನೇಮಕಕ್ಕೆ ಸಂಬಂಧಿಸಿದ ಕಾರ್ಯಭಾರ ಹಾಗೂ ಷರತ್ತುಗಳು**

1. ಸರ್ವ ಶಿಕ್ಷಣ ಅಭಿಯಾನ ಸಮಿತಿಯಲ್ಲಿ ಮಾಧ್ಯಮ ಹಾಗೂ ದಾಖಲೀಕರಣ ಕೋಶವನ್ನು ಸ್ಥಾಪಿಸಲಿದ್ದು, ಅನುಭವೀ ಸಂಸ್ಥೆಗಳಿಂದ ಆಸಕ್ತ ಅಭಿವ್ಯಕ್ತಿಯನ್ನು ಕರೆಯಲಾಗಿದೆ.
2. ಈ ನೇಮಕವು ಸಂಪೂರ್ಣವಾಗಿ ತಾತ್ಕಾಲಿಕ ಅವಧಿಗೆ, ಪ್ರಾರಂಭದಲ್ಲಿ 01 ವರ್ಷ, ಸೀಮಿತವಾಗಿರುತ್ತದೆ. ಮುಂದೆಂದೂ, ಶಾಶ್ವತಗೊಳ್ಳುವ ಸಂಭವ ಇಲ್ಲ. ಒಂದು ತಿಂಗಳ ಮುನ್ಸೂಚನೆ ಸಹಿತ, ನೇಮಕವನ್ನು

ಸ್ಥಗಿತಗೊಳಿಸುವ ಹಕ್ಕು ಇಲಾಖೆಗೆ ಇದ್ದರೆ, ಈ ಕೆಲಸವನ್ನು ಬಿಡುವ ಹಕ್ಕು ಸಮಾಲೋಚಕರಿಗೆ / ಸಂಸ್ಥೆಗೆ ಇರುತ್ತದೆ.

3. ಸಮಾಲೋಚಕರಿಗೆ, ಸಾಮಾನ್ಯವಾಗಿ ಈ ಕೆಳಗಿನ ಕಾರ್ಯಭಾರ ಇರುತ್ತದೆ. ಚಟುವಟಿಕೆಗಳ ಪರಿಕಲ್ಪನೆ, ಸಂಯೋಜನೆ, ಸಾಹಿತ್ಯ ರಚನೆ, ವಿನ್ಯಾಸ, ಸಮರ್ಪಕ ನಿರ್ವಹಣೆ, ಹಿಮ್ಮಾಹಿತಿ ಜವಾಬ್ದಾರಿಗಳಿರುತ್ತವೆ.

**ಚಟುವಟಿಕೆಗಳು :–**

a. **ಶಿಕ್ಷಣ ಇಲಾಖೆ :** ಕಾಲಕಾಲಿಕ ಜಾಹಿರಾತುಗಳು, ಪ್ರೆಸ್ ಮೀಟ್‌ಗಳು, ಸಮಾವೇಶ / ಸಮಾರಂಭಗಳ ಸಾರ್ವಜನಿಕ ಮಾಹಿತಿ, ಸರ್ಕಾರದ ಸಂಕ್ಷಿಪ್ತ ಸಂದೇಶಗಳು, ಇತ್ಯಾದಿ ವಿಷಯಗಳ ಬಗ್ಗೆ ಅಗತ್ಯತೆ ಆಧಾರದ ಮೇಲೆ ಪತ್ರಿಕಾ / ಆಕಾಶವಾಣಿ / ದೂರದರ್ಶನ / ಜಾನಪದ ಮಾಧ್ಯಮಗಳಲ್ಲಿ ಪ್ರಸಾರಕ್ಕೆ ಸಾಹಿತ್ಯ ರಚನೆ ಹಾಗೂ ನಿರ್ವಹಣೆ.

b. **ಸರ್ವ ಶಿಕ್ಷಣ ಅಭಿಯಾನ**

i. **ಪ್ರಚಾರ ಸಾಹಿತ್ಯ :–** ಮಕ್ಕಳ ಗಣತಿ ಕಾರ್ಯದ ಪೂರ್ವಭಾವಿಯಾಗಿ ಅದರ ಪ್ರಾಮುಖ್ಯತೆ, ಮಾಡಿರುವ ಏರ್ಪಾಟುಗಳು, ಸಾರ್ವಜನಿಕರ ಸಹಕಾರದ ಅಗತ್ಯ ಇತ್ಯಾದಿಗಳ ಬಗ್ಗೆ ಸಾರ್ವಜನಿಕ ಮಾಹಿತಿ ಹಂಚಿಕೆ. ಅಧ್ಯಾಪಕರ ದಿನಾಚರಣೆಯ ಪೂರ್ವದಲ್ಲಿ ಅಧ್ಯಾಪಕ ಪ್ರಶಸ್ತಿಗಳು, ದಿನಾಚರಣೆಯ ಏರ್ಪಾಟುಗಳು ಇತ್ಯಾದಿಗಳ ಬಗ್ಗೆ ; ಸೂಕ್ತ ಕಾಲದಲ್ಲಿ ಮಕ್ಕಳ ಶಿಕ್ಷಣ ಹಕ್ಕುಗಳ ಕಾಯಿದೆ, ಕ್ರೀಡಾಕೂಟ, ಪ್ರತಿಭಾ ಕಾರಂಜಿ, ಸಮುದಾಯದತ್ತ ಶಾಲೆ, ರಾಜ್ಯಮಟ್ಟದ ರಸಪ್ರಶ್ನೆ ಕಾರ್ಯಕ್ರಮ, ಶಾಲೆಗಾಗಿ ನಾವು–ನೀವು ಮುಂತಾದ ಕಾರ್ಯಕ್ರಮಗಳಿಗೆ ಪ್ರಚಾರ ಸಾಹಿತ್ಯ ತಯಾರಿಕೆ, ವಿಜ್ಞಾನ ವಸ್ತುಪ್ರದರ್ಶನ–ಇವುಗಳ ಬಗ್ಗೆ ಹೀಗೆ ಪ್ರತಿಕಾ ಗೋಷ್ಠಿಗಳನ್ನು ನಡೆಸಲು ಸಾಹಿತ್ಯ ರಚಿಸುವುದು. ಜನ ಸಮುದಾಯಕ್ಕೆ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮತ್ತು ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಕುರಿತಂತೆ ಮಾಹಿತಿಗಳನ್ನು ಜನಸಾಮಾನ್ಯರಿಗೆ ತಿಳಿಸುವ ಸಾಹಿತ್ಯ ಪ್ರಕಟಣೆ. ರಾಜ್ಯಮಟ್ಟದ ಪ್ರಮುಖ ಕಾರ್ಯಕ್ರಮಗಳ ಸಮಯದಲ್ಲಿ ಮಾಧ್ಯಮ ಭೇಟಿಗಾಗಿ ಮಂತ್ರಿಗಳಿಗೆ, ಇಲಾಖೆಯ ಮುಖ್ಯಸ್ಥರಿಗೆ ಟಿಪ್ಪಣಿ ತಯಾರಿಕೆ.

ii. **ಮುದ್ರಣ ಮತ್ತು ದೂರದರ್ಶನ, ರೇಡಿಯೋ ಮಾಧ್ಯಮಗಳ ಮೂಲಕ ಪ್ರಸಾರ ಮತ್ತು ಮುದ್ರಿತ ಮಾಧ್ಯಮಗಳಲ್ಲಿ ಜಾಹಿರಾತು:–** ಮಕ್ಕಳ ಗಣತಿ, CWSN ಮಕ್ಕಳಿಗಾಗಿ ವೈದ್ಯಕೀಯ ಶಿಬಿರ, ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ, ಶಾಲೆಗಳಲ್ಲಿ ಸಹಪಠ್ಯ ಚಟುವಟಿಕೆಗಳ ನಿರ್ವಹಣೆ–ಇಂತಹವುಗಳ ಬಗ್ಗೆ ಸೂಕ್ತ ಸಮಯದಲ್ಲಿ ರೇಡಿಯೋ ಕಾರ್ಯಕ್ರಮಗಳನ್ನು ಆಯೋಜಿಸುವುದು. ಇದೇ ರೀತಿ ಟಿವಿ ವಾಹಿನಿಗಳ ಮೂಲಕ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ಚರ್ಚೆ ಮತ್ತು ಪ್ರಚಾರಗಳನ್ನು ಆಯೋಜಿಸುವುದು. ಅಧ್ಯಾಪಕ ದಿನಾಚರಣೆ, ಮಕ್ಕಳ ದಿನಾಚರಣೆ ಸಂದರ್ಭಗಳಲ್ಲಿ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡವುದು.

iii. **ವಸ್ತು ಪ್ರದರ್ಶನ, ಮೇಳ, ಜಾತ್ರೆಗಳ ಸಾಹಿತ್ಯ ಮತ್ತು ದಾಖಲೀಕರಣ:–** ಈ ಶೀರ್ಷಿಕೆಯಡಿ ಮುಖ್ಯವಾಗಿ ಟಿ.ಎಲ್.ಎಂ. ಮೇಳಗಳ ಪ್ರಚಾರ ಮತ್ತು ದಾಖಲೀಕರಣ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಇದಕ್ಕೆ ಮಾರ್ಗದರ್ಶನ ನೀಡುವುದು.

ಮೀನಾ ಮೇಳ, ತಾಯಂದಿರ ದಿನಾಚರಣೆ, ತಾಯಿ ಮಗಳ ಮೇಳಗಳನ್ನು ಆಯೋಜಿಸಲು ಜಾಗೃತಿಯ ಸಾಹಿತ್ಯ ರಚನೆ.

iv. **ಶೈಕ್ಷಣಿಕ ಭಿತ್ತಿಪತ್ರಗಳು, ಕರಪತ್ರಗಳು, ಫೋಲ್ಡರ್‌ಗಳ ಸಾಹಿತ್ಯ:–** ಸರ್ವ ಶಿಕ್ಷಣ ಅಭಿಯಾನದ ವಿವಿಧ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸುವುದಕ್ಕಾಗಿ ಕರಪತ್ರಗಳನ್ನು ಮುದ್ರಿಸಿ ವಿತರಿಸಲು ಸಾಹಿತ್ಯ ಸಾರ್ವಜನಿಕರಲ್ಲಿ ಅಷ್ಟೊಂದು ಪರಿಚಿತವಿರದ ಕರೆಕ್ಟಿವ್ ಸರ್ಜರಿ, CWSN ಮಕ್ಕಳಿಗೆ ಉಪಕರಣಗಳನ್ನು ನೀಡುವುದು, ತರಬೇತಿ ಪ್ಯಾಕೇಜ್‌ಗಳು ಇಂತಹವನ್ನು ಆಕರ್ಷಕವಾಗುವಂತೆ ಪ್ರಚಾರ ಸಾಹಿತ್ಯ ಸೃಷ್ಠಿ. ಸರ್ವ ಶಿಕ್ಷಣ ಅಭಿಯಾನದ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ದಂಡನೆ ರಹಿತ ಶಿಕ್ಷಣ ಮುಂತಾದ ಮೂಲಾಂಶಗಳ ಚಾರ್ಟ್‌ಗಳನ್ನು ಹೆಣ್ಣು ಮಕ್ಕಳ ಶಿಕ್ಷಣದ ಪ್ರಾಮುಖ್ಯ, ಬಾಲ್ಯವಿವಾಹದ ಬಗ್ಗೆ ಜಾಗೃತಿ, ಕಿಶೋರಿ ಕಾರ್ಯಕ್ರಮ ಮುಂತಾದವುಗಳಿಗೆ ಬ್ಯಾನರ್ ತಯಾರಿ.

v. **ಸಾಕ್ಷ್ಯಚಿತ್ರ, ಕಿರುಚಿತ್ರ ರಚನೆ ಮತ್ತು ಪ್ರದರ್ಶನಗಳು :–** ಸರ್ವ ಶಿಕ್ಷಣ ಅಭಿಯಾನದ ಆಯ್ದ ಹಾಗೂ ವಿಶಿಷ್ಟ ಕಾರ್ಯಕ್ರಮಗಳನ್ನು ಅನುಭವಿ ಹಾಗೂ ಶಿಕ್ಷಣದಲ್ಲಿ ಆಸಕ್ತಿ ಹೊಂದಿರುವ ನಿರ್ಮಾಪಕರೊಂದಿಗೆ ಅಥವಾ ಟಿವಿವಾಹಿನಿಗಳ ಮಾಲೀಕರೊಂದಿಗೆ ಸಮಾಲೋಚಿಸಿ ಚಿತ್ರೀಕರಿಸಿ ಡಾಕ್ಯುಮೆಂಟರಿ ರೀತಿಯಲ್ಲಿ ಸಿದ್ದಪಡಿಸುವುದು.

vi. **ಜಾನಪದ, ಮಾಧ್ಯಮ, ಬುಡಕಟ್ಟು ಜನರ ಅರಿವು ಕಾರ್ಯಕ್ರಮಗಳು:–** ಬೀದಿ–ನಾಟಕ, ಯಕ್ಷಗಾನ ದೊಡ್ಡಾಟ ನಾಟಕ – ಇಂತಹವುಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಅಳವಡಿಸಿ ಪ್ರಚಾರಕ್ಕಾಗಿ ಬಳಸಲು ಯೋಜನೆ ತಯಾರಿ. ರಾಷ್ಟ್ರೀಯ ಹಬ್ಬಗಳಂದು ಸ್ಥಳೀಯ ಜಾತ್ರೆಗಳ ಸಂದರ್ಭದಲ್ಲಿ ಆಯೋಜಿಸುವುದು ಸೂಕ್ತ ಹೆಣ್ಣು ಮಕ್ಕಳ ಶಿಕ್ಷಣ, ಬ್ಯಾಲ ವಿವಾಹ ನಿಷೇಧ, ವರದಕ್ಷಿಣೆ ಕಿರುಕುಳ–ಇಂತಹವನ್ನು ಈ ಪ್ರದರ್ಶನಗಳಿಂದ ಜಾಗೃತಿ ಮೂಡಿಸಲು ಬಳಸಿಕೊಳ್ಳುವುದಕ್ಕೆ ಮಾರ್ಗದರ್ಶನ. ಕೆಲವು ಜಿಲ್ಲೆಗಳಲ್ಲಿ ಬುಡಕಟ್ಟು/ಆದಿವಾಸಿ ಕುಟುಂಬಗಳ ಜನ ವಸತಿ ಪ್ರದೇಶಗಳಿದ್ದು, ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಅರಿವು ನೀಡಲು ಹಾಗೂ ಅಲ್ಲಿಯ ಮಕ್ಕಳನ್ನು ಮುಖ್ಯವಾಹಿನಿಗೆ ಸೇರ್ಪಡೆಯಾಗುವಂತೆ ಪ್ರೇರೇಪಿಸಲು ಕಾರ್ಯಕ್ರಮಗಳನ್ನು ಅಂತಹ ಕಡೆ ವಿಶೇಷವಾಗಿ ಹಮ್ಮಿಕೊಳ್ಳುವುದಕ್ಕೆ ಮಾರ್ಗದರ್ಶನ. ಉದಾಹರಣೆಗೆ ಬಿಜಾಪುರ ಬಾಗಲಕೋಟೆ ಜಿಲ್ಲೆಗಳ ಶೈಕ್ಷಣಿಕವಾಗಿ ಹಿಂದುಳಿದ ಲಂಬಾಣಿ ತಾಂಡಾ, ಗೊಲ್ಲರ ಹಟ್ಟಿಗಳು, ಬೋವಿ ಹಟ್ಟಿಗಳು, ಹಕ್ಕಿ–ಪಿಕ್ಕಿ ಜನಾಂಗ ಪ್ರದೇಶಗಳಲ್ಲಿ ಕಾರ್ಯಕ್ರಮಗಳು.

vii. **ವಿಶಿಷ್ಟ ಚಟುವಟಿಕೆಗಳಂತಹ ಬ್ಯಾನರ್, ಗೋಡೆ ಬರಹ ಮತ್ತು ಚಿತ್ರಗಳು, ಬೀದಿನಾಟಕ, ಬೊಂಬೆ ಪ್ರದರ್ಶನ, ರೂಪಕಗಳು, ಪೋನ್–ಇನ್ ರೇಡಿಯೋ ಕಾರ್ಯಕ್ರಮಗಳು, ಐ.ಇ.ಪಿ. ಕಾರ್ಯಕ್ರಮಗಳು, ಐ.ಸಿ.ಪಿ. ಕಾರ್ಯಕ್ರಮಗಳು, ಸಂಚಾರಿ ವಾಹನಗಳಲ್ಲಿ ವಸ್ತು ಪ್ರದರ್ಶನ ಕಾರ್ಯಕ್ರಮಗಳು:–** ಈ ಕಾರ್ಯಕ್ರಮಗಳಿಗೆ ಮಾರ್ಗದರ್ಶನ, ಸಾಹಿತ್ಯ ಸೃಷ್ಠಿ.

c. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಪತ್ರಿಕಾಗೋಷ್ಠಿ, ಬ್ರೋಶರ್‌ಗಳು, ಪತ್ರಿಕಾ ಹೇಳಿಕೆ, ಆಕಾಶವಾಣಿ ಕಾರ್ಯಕ್ರಮಗಳು, ದೂರದರ್ಶನ ಕಾರ್ಯಕ್ರಮಗಳು, ಜಾತ್ರೆಗಳಲ್ಲಿ ಭಾಗವಹಿಸುವಿಕೆ, ರಾಷ್ಟ್ರೀಯ ಹಬ್ಬಗಳ ಸಂಘಟನೆ, ವಾರ್ತಾ ಪತ್ರಿಕೆಗಳು, ವೀಡಿಯೋ ಕಾನ್ಫರೆನ್ಸ್, ಟೆಲಿ ಕಾನ್ಫರೆನ್ಸ್, – ಇಂತಹವುಗಳನ್ನು ವ್ಯವಸ್ಥೆ ಮಾಡುವುದು ಮತ್ತು ನಿರ್ವಹಿಸುವುದು. ಇತರ ಇಲಾಖೆಗಳೊಂದಿಗೆ ಸಮನ್ವಯಿಸಿಕೊಂಡು ಸಮುದಾಯ ಬೆಂಬಲದೊಂದಿಗೆ ಕಾರ್ಯಕ್ರಮಗಳನ್ನು ಸಂಘಟಿಸುವುದು. ಫೋಟೋಗಳು, ವಾರ್ತಾಪತ್ರಿಕೆಗಳ ತುಣುಕುಗಳು, ವಿಶ್ಲೇಷಣಾ ವರದಿಗಳು, ವಾರ್ಷಿಕ ವರದಿಗಳು ಇವುಗಳನ್ನು ಸಂಗ್ರಹಿಸಿ ಸೂಕ್ತವಾಗಿ ಮಂಡಿಸುವುದು. ವೆಬ್‌ಸೈಟ್‌ಗಳನ್ನು ನಿರ್ವಹಿಸುವುದು, ಲೈಬ್ರರಿಗಳನ್ನು ನಿರ್ವಹಿಸುವುದು, ಮಧ್ಯವರ್ತನವಾರು ಪ್ರಗತಿ ವರದಿಗಳನ್ನು ಆಕರ್ಷಕವಾಗಿ ಮಂಡಿಸುವುದು. ಇತ್ಯಾದಿ...

4. ನೇಮಕವಾಗುವ ಸಮಾಲೋಚಕರು, ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ / ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (SSA / RMSA), ನಿರ್ದೇಶಕರು ಸ.ಶಿ.ಅ / ಆರ್.ಎಂ.ಎಸ್.ಎ ಮತ್ತು ರಾಜ್ಯ ಶಿಕ್ಷಣ ಇಲಾಖೆಗಳ ನಿರ್ದೇಶಕರ ಜೊತೆಗೂಡಿ ಮಾಧ್ಯಮ ಹಾಗೂ ದಾಖಲೀಕರಣ ಕೋಶದ ಚಟುವಟಿಕೆಗಳನ್ನು ನಿರ್ವಹಿಸಬೇಕು. ಎಲ್ಲಾ ಸಂದರ್ಭಗಳಲ್ಲೂ ಇಲಾಖೆಯ ಪ್ರಚಾರ ಸಾಹಿತ್ಯದ ಗೋಪ್ಯತೆ ಕಾಪಾಡ ಬೇಕಾಗಿರುತ್ತದೆ.
5. ಆಯ್ಕೆ ಸಮಿತಿ : ಸ್ವೀಕೃತ ನಮೂನೆಗಳನ್ನು ಪರಿಶೀಲಿಸಲು ಸ.ಶಿ.ಅದ ನಿರ್ದೇಶಕರು, ಸಮಲೋಚಕರು, ಜಂಟಿನಿರ್ದೇಶಕರು (ಗು) ಹಾಗೂ JPOರವರು, ನಿರ್ದೇಶಕರ ಹೊಣೆಗಾರಿಕೆಯಲ್ಲಿ ನಿರ್ವಹಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುತ್ತಾರೆ. ಅಂತಿಮ ಆಯ್ಕೆ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರದ್ದೇ ಆಗಿರುತ್ತದೆ. ಇವರ ನಿರ್ಣಯಗಳು ಅಂತಿಮವೂ ಹಾಗೂ ಪ್ರಶ್ನಾತೀತವೂ ಆಗಿರುತ್ತದೆ.

**ಕಡ್ಡಾಯ ನಿಬಂಧನೆಗಳು :–**

1. ಆಸಕ್ತಿದಾರ ಸಂಸ್ಥೆಯು ಸಾರ್ವಜನಿಕ ಸಂಪರ್ಕ ಸಂಸ್ಥೆಯಾಗಿ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತವಾಗಿರಬೇಕು. ಮತ್ತು ಕನಿಷ್ಠ ಮೂರು ವರ್ಷಗಳ ಅನುಭವವಿರಬೇಕು.
2. ರಾಜ್ಯಮಟ್ಟದ ಪತ್ರಿಕೆಗಳಲ್ಲದೆ ಸ್ಥಳೀಯ ಮಟ್ಟದ ಅಂದರೆ ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟ ಇಂತಹ ಪತ್ರಿಕೆಗಳ ಪರಿಚಯವಿರಬೇಕು.
3. ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಗಳನ್ನು ಮಾಧ್ಯಮಗಳ ಮೂಲಕ ನಿರ್ವಹಿಸಿದ ಅನುಭವವಿರಬೇಕು.
4. ಒಬ್ಬ ಸಮಾಲೋಚಕರನ್ನು ನೇಮಿಸಿದ ಮೇಲೆ ಕನಿಷ್ಠ ಒಂದು ವರ್ಷ ಅವರ ಸೇವೆಯನ್ನು ಹಿಂಪಡೆಯುವಂತಿಲ್ಲ.
5. ಸರ್ವ ಶಿಕ್ಷಣ ಅಭಿಯಾನ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಯಾವುದೇ ಜಾಹೀರಾತು ಟೆಂಡರ್ ಅಥವಾ ಇತರೆ ಯಾವುದೇ ಚಟುವಟಿಕೆಯನ್ನು

ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಯು, ಮಾಧ್ಯಮ ಹಾಗೂ ದಾಖಲೀಕರಣ ಕೋಶದ ಸಮಾಲೋಚಕರಾಗಲು ಈ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

6. ಒಂದು ವೇಳೆ ಟೆಂಡರ್ ಸಲ್ಲಿಸಿ ಆಯ್ಕೆಯಾಗಿ ಸದರಿ ಷರತ್ತನ್ನು ಉಲ್ಲಂಘಿಸಿದಲ್ಲಿ ಇಂತಹ ಸಮಾಲೋಚಕರು ಅನರ್ಹರಾಗುತ್ತಾರೆ ಅಂತಹ ನೇಮಕಾತಿಯನ್ನು ಯಾವುದೇ ಕಾರಣ ನೀಡದೆ ರದ್ದುಗೊಳಿಸುವ ಅಧಿಕಾರವನ್ನು ರಾಜ್ಯ ಯೋಜನಾ ನಿರ್ದೇಶಕರು ಹೊಂದಿರುತ್ತಾರೆ.

******************

**ಮೀಡಿಯಾ ಸಮಾಲೋಚಕರ ನೇಮಕಾತಿಗಾಗಿ ಅರ್ಜಿ ನಮೂನೆ**

| | | |
|---|---|---|
| 1 | ಸ್ವಯಂ ಸೇವಾ ಸಂಸ್ಥೆಯ ಹೆಸರು | |
| 2 | ವಿಳಾಸ | |
| 3 | ನೊಂದಣಿ ಸಂಖ್ಯೆ | |
| 4 | ಸ್ಥಾಪನೆಯ ವರ್ಷ | |
| 5 | ಸಂಸ್ಥೆಯ ಕಾರ್ಯ ಚಟುವಟಿಕೆಗಳ ವಿವರ | |
| 6 | ಸೇವಾ ಅನುಭವ | |
| 7 | ಜಾಹೀರಾತು ನಿರ್ವಹಣೆ, ಸಾರ್ವಜನಿಕ ಕಾರ್ಯಕ್ರಮ ಸಂಘಟನೆ ಈ ಕ್ಷೇತ್ರಗಳಲ್ಲಿ ಇರುವ ಅನುಭವದ ವಿವರ | |
| 8 | ಪತ್ರಿಕಾ ರಂಗದಲ್ಲಿ ಕಾರ್ಯ ನಿರ್ವಹಿಸಿದ್ದಲ್ಲಿ ವಿವರ | |
| 9 | ನಿರೀಕ್ಷಿಸುವ ಮಾಸಿಕ ಸಂಭಾವನೆ | |
| 10 | 1 ರಿಂದ 5 ನಿಬಂಧನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಿವರದೊಂದಿಗೆ ಒದಗಿಸುವುದು | |

**ಅರ್ಜಿದಾರರ ಸಹಿ**